346 (318) ಶ್ರೀ ಗೋಪಾಲ ಪೂಜಾರಿ ಕೆ (ಬೈಂದೂರು) ಮಾನ್ಯ ಲೋಕೋಪಯೋಗಿ ಹಾಗೂ ಇಂಧನ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೆ ಪಿ ಸಿ ಎಲ್ ಕಾರ್ಮಿಕರು ವೇತನವನ್ನು ಹೆಚ್ಚಿಸಲು ಪ್ರತಿಭಟನೆ ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಬಂದಿದ್ದಲ್ಲಿ, ಈ ಕಾರ್ಮಿಕರ ಸಮಸ್ಯೆಗೆ ಸರ್ಕಾರ ಸ್ಪಂದಿಸದಿರಲು ಕಾರಣವೇನು,

ಇ) ಕೆ ಪಿ ಸಿ ಎಲ್ ಕಾರ್ಮಿಕರಿಗೆ ವೇತನವನ್ನು ಪುನರ್ ನಿಗದಿಪಡಿಸುವಾಗ ಗ್ರಾಮೀಣ ಪ್ರದೇಶದಲ್ಲಿರುವ ನೌಕರರಿಗೆ ಯಾವುದೇ ಮೂಲಭೂತ ಸೌಕರ್ಯಗಳನ್ನು ಒದಗಿಸದೇ ಇರುವುದರಿಂದ ಇತರೆ ಕಾರ್ಮಿಕರಿಗೆ ನೀಡುತ್ತಿರುವ ವೇತನದಲ್ಲಿ ತಾರತಮ್ಯವಿರುವುದಿಲ್ಲವೇ?

ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಹಾಗೂ ಇಂಧನ ಸಚಿವರು)

ಅ) ಬಂದಿದೆ

ಆ) ಕೆ ಪಿ ಸಿ ಎಲ್ ನಲ್ಲಿನ ವೇತನ ಪರಿಷ್ಕರಣ ಹಾಗೂ ಇತರ ಸೇವಾ ಸವಲತ್ತುಗಳ ವಿಷಯಕ್ಕೆ ಸಂಬಂಧಪಟ್ಟಂತೆ ನೀತಿಯನ್ನು ಯೂನಿಯನ್ ಗಳೊಂದಿಗೆ ಮಾಡಿಕೊಳ್ಳಲಾಗುವ ಒಪ್ಪಂದಗಳನ್ವಯ ರಚಿಸಲಾಗುತ್ತದೆ ಈ ಹಿಂದಿನ ಒಪ್ಪಂದವು 31 12 2003 ರಂದು ಕೊನೆಗೊಂಡಿರುತ್ತದೆ ಯೂನಿಯನ್ ಗಳು ಹೊಸ ಬೇಡಿಕೆ ಪಟ್ಟಿಗಳನ್ನು ಸಲ್ಲಿಸಿ ವೇತನದಲ್ಲಿ ಶೇಕಡ 40% ರಷ್ಟು ಹೆಚ್ಚಳವನ್ನು ಹಾಗೂ ಸೇವೆಯನ್ನಾಧರಿಸಿ 1 ರಿಂದ 4 ರಷ್ಟು ವೇತನ ಬಡ್ತಿಗಳನ್ನು ಇತರ ಅಂಶಗಳೊಂದಿಗೆ ಕೋರಿದ್ದವು ಬೇಡಿಕೆಗಳ ಕುರಿತು ಚರ್ಚಿಸಲಾಗಿರುತ್ತದೆ 15 ದ್ವಿ ಪಕ್ಷೀಯ ಸಭೆಗಳು ನಡೆದವು ಆಡಳಿತ ವರ್ಗವು ವೇತನದಲ್ಲಿ ಶೇಕಡ 9 5 ರಷ್ಟು ಹೆಚ್ಚಳ +ಒಂದು ಹೆಚ್ಚುವರಿ ವಾರ್ಷಿಕ ವೇತನ ಬಡ್ತಿ ಹಾಗೂ ವಿವಿಧ ಭತ್ಯೆಗಳಲ್ಲಿ ಹೆಚ್ಚಳವನ್ನು ನೀಡಲು ಒಪ್ಪಿರುತ್ತದೆ ಸಂಘಗಳು ಈ ನೀಡಿಕೆಯನ್ನು ಒಪ್ಪದೆ ಮುಷ್ಕರದ ನೋಟಿಸನ್ನು ನೀಡಿರುವ ಕಾರ್ಮಿಕ ಆಯುಕ್ತರು ಮಧ್ಯ ಪ್ರವೇಶಿಸಿ ಈವರೆಗೆ 5 ಸಂಧಾನ ಸಭೆಗಳನ್ನು ನಡೆಸಿರುವರು ಅವರ ಸಲಹೆಗನುಗುಣವಾಗಿ ಇನ್ನು ಎರಡು ದ್ವಿ ಪಕ್ಷೀಯ ಸಭೆಗಳು ನಡೆದಿರುತ್ತವೆ ಮುಂದಿನ ಸಂಧಾನ ಸಭೆಯು ದಿ 6 2 2007 ರಂದು ನಿಗಧಿಯಾಗಿರುತ್ತದೆ

ವೇತನ ಪರಿಷ್ಕರಣಕ್ಕೆ ಸಂಬಂಧಪಟ್ಟಂತೆ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಹಾಕಿಕೊಟ್ಟ "ವಲಯ–ಉದ್ಯಮ" ಸೂತ್ರವನ್ನು ಕೆಪಿಸಿಎಲ್ ಅನುಸರಿಸುತ್ತಿದೆ ಈಗಿನ ಉದ್ದೇಶಿತ ನೀಡಿಕೆಯು ಈ ಸೂತ್ರಕ್ಕೆ ಅನುಗುಣವಾಗಿದ್ದು ಕೆಪಿಸಿಎಲ್ ನ ಉದ್ಯೋಗಿಗಳು ರಾಜ್ಯದಲ್ಲಿರುವ ವಿದ್ಯುತ್ ಉದ್ಯಮದಲ್ಲಿನ ಇತರ ಸಂಸ್ಥೆಗಳಲ್ಲಿನ ಕಾರ್ಮಿಕರಿಗಿಂತ ಹೆಚ್ಚಿನ ಲಾಭವನ್ನು ಇದರಿಂದ ಪಡೆಯಲಿರುವರು ಆದುದರಿಂದ ಉದ್ದೇಶಿತ ಕೊಡುಗೆಯು ನ್ಯಾಯಯುತವೂ ಹಾಗೂ ಸಮರ್ಥನೀಯವೂ ಆಗಿರುತ್ತದೆ

ಇ) ಸೌಲಭ್ಯಗಳು ಇಲ್ಲದಿರುವಲ್ಲಿ ಹಣಕಾಸಿನ ಪರಿಹಾರ ನೀಡಲಾಗುತ್ತಿದ್ದು ಯಾವುದೇ ತಾರತಮ್ಯವಿರುವುದಿಲ್ಲ

342 (319) ಶ್ರೀ ಗೋಪಾಲ ಪೂಜಾರಿ ಕೆ (ಬೈಂದೂರು) . ಮಾನ್ಯ ಲೋಕೋಪಯೋಗಿ ಹಾಗೂ ಇಂಧನ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಡುಪಿ ಜಿಲ್ಲೆಯಿಂದ ಶಿವಮೊಗ್ಗ ಜಿಲ್ಲೆಗೆ ನೇರ ಸಂಪರ್ಕ ಕಲ್ಪಿಸುವ ಬೈಂದೂರು–ಕಾರ್ನಿ–ಸಾಗರ ರಸ್ತೆಯನ್ನು ನಿರ್ಮಿಸಲು ತುಂಬಾ ವರ್ಷದಿಂದ ಆ ಭಾಗದ ಜನರು ಸರ್ಕಾರಕ್ಕೆ ಹಲವಾರು ಮನವಿಗಳನ್ನು ಸಲ್ಲಿಸಲಾಗಿರುವುದು ನಿಜವೇ,

ಆ) ಹಾಗಿದ್ದಲ್ಲಿ ಈ ರಸ್ತೆ ನಿರ್ಮಾಣ ಮಾಡುವ ಪ್ರಸ್ತಾವನೆ ಯಾವ ಹಂತದಲ್ಲಿದೆ?

ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಹಾಗೂ ಇಂಧನ ಸಚಿವರು)

ಅ) ಹೌದು

ಆ) ಬೈಂದೂರು–ಗಂಗನಾಡು–ಕಾರ್ನಿ–ಸಾಗರ ರಸ್ತೆಯು ಒಟ್ಟಾರೆ 85 ಕಿಮೀ ಉದ್ದವಿರುತ್ತದೆ ಇದರಲ್ಲಿ ಉಡುಪಿ ಜಿಲ್ಲೆಯಲ್ಲಿನ ಕುಂದಾಪುರ ತಾಲ್ಲೂಕಿನಲ್ಲಿ ಬೈಂದೂರಿನಿಂದ ಗಂಗನಾಡು ವರೆಗೆ 9 ಕಿ ಮೀ ಉದ್ದವಿದ್ದು ಇದು ಗ್ರಾಮೀಣ ರಸ್ತೆಯಾಗಿರುತ್ತದೆ ಗಂಗನಾಡುನಿಂದ ಕಾರ್ನಿವರೆಗೆ ಒಟ್ಟಾರೆ 12 ಚಕಿಮೀ ಇದ್ದು ಇದು ವನ್ಯ ಜೀವಿ ರಕ್ಷಿತ ಅರಣ್ಯಪ್ರದೇಶದಲ್ಲಿ ಹಾದುಹೋಗುತ್ತಿದೆ (ಕಾಲುದಾರಿ) ಸದರಿ ಪ್ರದೇಶವು ಅರಣ್ಯ ಪ್ರದೇಶದಲ್ಲಿ ಹಾದು ಹೋಗುತ್ತಿರುವುದರಿಂದ ರಸ್ತೆ ನಿರ್ಮಾಣಕ್ಕೆ ಅರಣ್ಯ ಇಲಾಖೆಯಿಂದ ಹಾಗೂ ಕೇಂದ್ರ ಸರ್ಕಾರದಿಂದ ಅನುಮೋದನೆ ದೊರೆತಿರುವುದಿಲ್ಲ ಕಾರ್ನಿಯಿಂದ ಸಾಗರಕ್ಕೆ 66 00 ಕಿಮೀ ಉದ್ದವಿದ್ದು ಇದರಲ್ಲಿ ಪ್ರಾರಂಭಿಕ 3